ದಿ: **18-09-2024**ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಶ್ರೀ ಎನ್.ಎಸ್.ಆರ್.ಬಿ ವಕೀಲರಿಂದ :**

ನಾನು ಮಾಸ್ತಿಯ ಮಗಳು ಎಂದರೆ ಸರಿ. ನಾನು ದಿನಾಂಕ 01-06-1992ರಂದು ಜನಿಸಿರುತ್ತೇನೆ. ಮಹಾಕಾಳಿ ಹೆಂಗ್ಸು ಯಾರು ಎಂದು ತಿಳಿದಿದೆ. ಮಹಾಕಾಳಿ ಹೆಂಗ್ಸಿಗೆ ನಾಲ್ಕು ಜನ ಮಕ್ಕಳು ಎಂದರೆ ಸಾಕ್ಷಿಯು ಮೂರು ಜನ ಮಕ್ಕಳು ಎನ್ನುತ್ತಾರೆ. ಮಹಾಕಾಳಿಗೆ ಅಮ್ಮಕ್ಕ ಎನ್ನುವ ಮಗಳೇ ಇರುವುದಿಲ್ಲ. ಶೇಷನಿಗೆ ಶೇಷಿ ಮತ್ತು ದುರ್ಗಿ ಎನ್ನುವ ಇಬ್ಬರು ಮಕ್ಕಳಿದ್ದರು ಎಂದರೆ ಸಾಕ್ಷಿಯು ಮದುವೆಯೇ ಆಗಿಲ್ಲ ಎನ್ನುತ್ತಾರೆ. ಶಾಸನಿಗೆ ಶೇಷಿಯಿಂದ ಕೃಷ್ಣ ಮತ್ತು ನಾರಾಯಣ ಎಂಬ ಮಕ್ಕಳಿದ್ದಾರೆ ಹಾಗೇ ದುರ್ಗಿಯಿಂದ ಕುಪ್ಪಯ್ಯ ಮತ್ತು ಕೃಷ್ಣ ಎನ್ನುವ ಮಕ್ಕಳಿದ್ದಾರೆ ಎಂದರೆ ಸರಿಯಲ್ಲ. ಆ ಪೈಕಿ ಶೇಷಿಯ ಮಗ ಕೃಷ್ಣ ತೀರಿಹೋಗಿದ್ದು, ಕೃಷ್ಣನಿಗೆ ಲಕ್ಷ್ಮಿ ಎನ್ನುವ ಮಗಳಿದ್ದಾಳೆ ಎಂದರೆ ಸರಿಯಲ್ಲ. ಹಾಗೇ ಶೇಷಿಯ ಇನ್ನೊಬ್ಬ ಮಗ ನಾರಾಯಾಣ ತೀರಿಕೊಂಡಿದ್ದು, ಆತನಿಗೆ ವಾಸುದೇವ, ಮಹಾಬಲ, ಮಂಜನಾಥ, ಚಂದ್ರ, ಆನಂದ, ಪೂರ್ಣಿಮಾ ಮತ್ತು ಮುಕಾಂಬು ಎಂಬ ಏಳು ಜನ ಮಕ್ಕಳಿದ್ದಾರೆ ಹಾಗೂ ಆತನ ಹೆಂಡತಿ ಗೌರಿ ಇದ್ದಾರೆ ಎಂದರೆ ಸರಿಯಲ್ಲ. ಶೇಷನ 2ನೇ ಹೆಂಡತಿ ದುರ್ಗಿಯ ಮಕ್ಕಳಾದ ಕೃಷ್ಣ ಮತ್ತು ಕುಪ್ಪಯ್ಯ ಈಗಲೂ ಜೀವಂತ ಇದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಈ ದಾವೆಯಲ್ಲಿ ಏನು ಸಾಧನೆ ಮಾಡುತ್ತಿದ್ದಾರೆ ಎಂದು ತಿಳಿದುಕೊಂಡಿಲ್ಲ.

ಮಹಾಕಾಳಿಯ 2ನೇ ಮಗಳಾದ ಮರ್ಲಿಗೆ ವೆಂಕಟ್ಟಯ್ಯ ಮತ್ತು ಮರಿಯಣ್ಣ ಎಂಬ ಇಬ್ಬರು ಮಕ್ಕಳಿದ್ದಾರೆ ಎಂದರೆ ಸಾಕ್ಷಿಯು ವೆಂಕಟ್ಟಯ್ಯನ ಬಗ್ಗೆ ಗೊತ್ತು, ಮರಿಯಣ್ಣನ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಮರಿಯಣ್ಣನ ಬಗ್ಗೆ ಇವತ್ತಿನವರೆಗೆ ತಿಳಿದುಕೊಳ್ಳಲು ಪ್ರಯತ್ನ ಮಾಡಲು ಯಾವುದೇ ಕಾರಣ ಇಲ್ಲ. ವೆಂಕಟ್ಟಯ್ಯನಿಗೆ ಅಮ್ಮಕ್ಕ ಎನ್ನುವ ಹೆಂಡತಿ ಇದ್ದರು ಎಂದರೆ ಸಾಕ್ಷಿಯು ಹೆಂಡತಿ ಇರುವ ಬಗ್ಗೆ ಗೊತ್ತು, ಆದರೆ ಅವರ ಹೆಸರು ಗೊತ್ತಿಲ್ಲ. ವೆಂಕಟ್ಟಯ್ಯನಿಗೆ ನಾಗಮ್ಮ, ಚಂದು, ಪುಟ್ಟಯ್ಯ, ಮರ್ಲಿ ಮತ್ತು ನಾಗಯ್ಯ ಎಂಬ ಐದು ಜನ ಮಕ್ಕಳು ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮರಿಯಣ್ಣ ಮತ್ತು ಆತನ ಹೆಂಡತಿ ಪರಮೇಶ್ವರಿ ತೀರಿಕೊಂಡಿದ್ದು, ಐದು ಜನ ಮಕ್ಕಳಿದ್ದಾರೆ ಎಂದರೆ ಗೊತ್ತಿಲ್ಲ. ಮರಿಯಣ್ಣನ ಐದು ಜನ ಮಕ್ಕಳು ಈಗಲೂ ಜೀವಂತ ಇದ್ದಾರೆ ಎಂದರೆ ಗೊತ್ತಿಲ್ಲ.

ಮಹಾಕಾಳಿಯ ಮೂರನೇ ಮಗಳು ಅಮ್ಮಕ್ಕ ತೀರಿಕೊಂಡಿದ್ದು ಅವರಿಗೆ ಗೋವಿಂದ, ವೆಂಕಪ್ಪ, ಮಾಚ, ಸುಬ್ಬಿ ಮತ್ತು ಮೂಡೂರ ಎಂಬ ಐದು ಜನ ಮಕ್ಕಳಿದ್ದಾರೆ ಎಂದರೆ ಸಾಕ್ಷಿಯು ಅಮ್ಮಕ್ಕ ಎಂಬ ಮಗಳಿಲ್ಲ ಎನ್ನುತ್ತಾರೆ. ಈ ಪೈಕಿ ವೆಂಕಪ್ಪ, ಮಾಚ ಮತ್ತು ಮೂಡೂರ ಈಗಲೂ ಜೀವಂತ ಇದ್ದಾರೆ ಎಂದರೆ ಸರಿ. ವೆಂಕಪ್ಪ, ಮಾಚ ಮತ್ತು ಮೂಡೂರ ಅವರ ತಂದೆ ತಾಯಿ ಮತ್ತು ಅಜ್ಜ ಅಜ್ಜಿ ಯಾರೆಂದು ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ. ಗೋವಿಂದ ಮತ್ತು ಆತನ ಹೆಂಡತಿ ವೆಂಕ ಇಬ್ಬರು ತೀರಿಕೊಂಡಿದ್ದು, ಅವರಿಗೆ ಗೋವಿಂದ ರಾಮಕೃಷ್ಣ, ಪಾರ್ವತಿ, ರಾಜು ಮತ್ತು ಮಹಾಬಲ ಎಂಬ ಐದು ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಸುಬ್ಬಿ ತೀರಿಕೊಂಡಿದ್ದು ಸಾಧು ಯಾನೆ ಸಾಧಮ್ಮ, ವೆಂಕ ಯಾನೆ ವೆಂಕಮ್ಮ ಎಂಬ ಇಬ್ಬರು ಮಕ್ಕಳಿದ್ದಾರೆ ಎಂದರೆ ಸಾಕ್ಷಿಯು ತಾಯಿಯ ಹೆಸರು ಗೊತ್ತಿಲ್ಲ, ವೆಂಕಮ್ಮ ಮತ್ತು ಸಾಧು ಎಂಬುವವರು ಇದ್ದಾರೆ ಎನ್ನುತ್ತಾರೆ. ಸದರಿ ಸಾಧುಗೆ ಅಣ್ಣಪ್ಪ, ಶಂಕರ, ಮಹೇಶ ಮತ್ತು ನಾಗಮ್ಮ ಎಂಬ ನಾಲ್ಕು ಜನ ಮಕ್ಕಳು ಎಂದರೆ ಸರಿ. ಆ ಪೈಕಿ ನಾಗಮ್ಮನಿಗೆ ನೀನಾದ್ ಮತ್ತು ವಂಶಿಕ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ವೆಂಕನಿಗೆ ತಿಮ್ಮಪ್ಪ ಎಂಬ ಮಗನಿದ್ದಾನೆ ಎಂದರೆ ಸರಿ.

ಮಹಾಕಾಳಿಯ ಕೊನೆಯ ಮಗಳು ಮಾಸ್ತಿ ಮೃತಪಟ್ಟಿದ್ದು, ಆಕೆಗೆ ತಂಗು ಮತ್ತು ಬಚ್ಚಿ ಎಂಬ ಇಬ್ಬರು ಮಕ್ಕಳಿದ್ದಾರೆ ಎಂದರೆ ಸರಿ. ತಂಗುಗೆ ಮರ್ಲ, ಮಹಾಕಾಳಿ, ಮಂಜಿ, ನಾರಾಯಣ, ರಾಮ, ಪರಮೇಶ್ವರಿ ಮತ್ತು ಕೃಷ್ಣ ಎಂಬ ಏಳು ಜನ ಮಕ್ಕಳು ಎಂದರೆ ಸರಿ. ಈ ಪೈಕಿ ಕೃಷ್ಣ ತೀರಿಕೊಂಡಿದ್ದು, ಆತನ ಹೆಂಡತಿ ಭಾರತಿ, ಮಕ್ಕಳಾದ ಪ್ರವೀಣ್ ಮತ್ತು ಪ್ರತಿಭಾ ಜೀವಂತ ಇದ್ದಾರೆ ಎಂದರೆ ಸರಿ. ಬಚ್ಚಿ ತೀರಿಕೊಂಡಿದ್ದು, ಆಕೆಗೆ ನಾಗ ಯಾನೆ ನಾಗು, ರಾಮು ಮತ್ತು ಗಂಗೆ ಎಂಬ ಮೂವರು ಮಕ್ಕಳಿದ್ದಾರೆ ಎಂದರೆ ಸರಿ. ಆ ಪೈಕಿ ರಾಮುಗೆ ಜ್ಯೋತಿ, ಸುಬ್ರಹ್ಮಣ್ಯ ಮತ್ತು ನಾಗರಾಜ ಮೂವರು ಮಕ್ಕಳು ಎಂದರೆ ಸರಿ. ಜ್ಯೋತಿಗೆ ಸಿದ್ಧಾರ್ಥ ಮತ್ತು ಸಮರ್ಥ ಎಂಬ ಇಬ್ಬರು ಮಕ್ಕಳಿದ್ದಾರೆ ಎಂದರೆ ಸರಿ. ಗಂಗೆಗೆ ರಾಜೇಶ್ ಮತ್ತು ಉಮೇಶ್ ಎಂಬ ಇಬ್ಬರು ಮಕ್ಕಳಿದ್ದಾರೆ ಎಂದರೆ ಸರಿ. ತಂಗು ಮಕ್ಕಳ ಪೈಕಿ ಮಹಾಕಾಳಿಗೆ ಲಿಖಿತ ಹೇಳಿಕೆ ಪುಟಸಂಖ್ಯೆ ನಾಲ್ಕರಲ್ಲಿ ಹೇಳಿರುವ ಹನ್ನೊಂದು ಜನ ಮಕ್ಕಳು ಇದ್ದಾರೆ ಎಂದರೆ ಸರಿ.

ಮಾಸ್ತಿಗೆ ನಾನೊಬ್ಬಳೆ ಮಗಳು ಎಂದರೆ ಸರಿ. ರಿಶನ್ ನನ್ನ ಮಗ. ರಾಧ ಅವರಿಗೆ ನವೀನ್ ಮತ್ತು ಕಿರ್ತನ್ ಇಬ್ಬರು ಮಕ್ಕಳು, ಗಿರಿಜಾನಿಗೆ ಕಾರ್ತಿಕ ಎನ್ನುವ ಒಬ್ಬ ಮಗ ಎಂದರೆ ಸರಿ. ಭಾರತಿಗೆ ಸುಬೀಕ್ಷಾ ಮತ್ತು

ಸಬೀಕ್ಷಾ ಎನ್ನುವ ಮಕ್ಕಳು, ಶ್ರೀಮತಿಗೆ ಮನೀಷ್ ಮತ್ತು ದೀಶಾ ಎಂಬ ಮಕ್ಕಳು ಎಂದರೆ ಸರಿ. ಶೈಲಾನಿಗೆ ಶಮಂತ ಎನ್ನುವ ಒಬ್ಬನೇ ಮಗ ಎಂದರೆ ಸರಿ.

ತಂಗುವಿನ ಇನ್ನೊಬ್ಬ ಮಗಳು ಮಂಜಿಗೆ ಲಿಖಿತ ಹೇಳಿಕೆ ಪುಟಸಂಖ್ಯೆ ನಾಲ್ಕರಲ್ಲಿ ಹೇಳಿರುವ ಆರು ಜನ ಮಕ್ಕಳು ಎಂದರೆ ಸರಿ. ಆ ಪೈಕಿ ಲಕ್ಷ್ಮಿಗೆ ಮೂವರು ಮಕ್ಕಳು ಎಂದರೆ ಸರಿ. ನಾಗರತ್ನ ಅವರಿಗೆ ಪ್ರಣವ್ ಎಂಬ ಮಕ್ಕಳಿದ್ದಾರೆ ಎಂದರೆ ಸರಿ. ತಂಗುವಿನ ಇನ್ನೊಬ್ಬ ಮಗಳ ಪರಮೇಶ್ವರಿಗೆ ಲಿಖಿತ ಹೇಳಿಕೆ ಪುಟಸಂಖ್ಯೆ ನಾಲ್ಕರಲ್ಲಿ ಹೇಳಿರುವ ಐದು ಮಕ್ಕಳು ಇದ್ದಾರೆ ಎಂದರೆ ಸರಿ. ಮುಕಾಂಬುವಿಗೆ ಧನರಾಜ್ ಮತ್ತು ಮೇಘನಾ ಎಂಬ ಮಗಳು ಎಂದರೆ ಸರಿ. ಜಾನಕಿಗೆ ಆರ್ಯನ್ ಎಂಬ ಒಬ್ಬ ಮಗನಿದ್ದಾನೆ ಎಂದರೆ ಸರಿ. ಮೇಲೆ ಹೇಳಿದ ಹೆಸರಿನ ವ್ಯಕ್ತಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಆ ಕಾರಣ ದಾವೆ ವಜಾವಾಗಬೇಕು ಎಂದರೆ ಸರಿಯಲ್ಲ.

ಮಹಾಕಾಳಿ ಹೆಂಗ್ಸಿಗೆ ದಾವೆಯ ಎ ಶೆಡ್ಯೂಲಿನ ಆಸ್ತಿಗಳು ಮತ್ತು ಸಿ ಶೆಡ್ಯೂಲಿನ ಐಟಂ ನಂಬ್ರ 5 ರ ಆಸ್ತಿ ಭೂನ್ಯಾಯ ಮಂಡಳಿಯಲ್ಲಿ ಆಕೆಗೆ ಪ್ರತ್ಯೇಕವಾಗಿ ಆದೇಶವಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಸಮಷ್ಟಿ ಕುಟುಂಬದಲ್ಲಿ ತೀರ್ಪಾಗಿದೆ ಎನ್ನುತ್ತಾರೆ. ಸರ್ವೆ ನಂಬ್ರ 360/1 ಮತ್ತು 360/2 ಗಳು ದರ್ಖಾಸ್ತ್ ಮೂಲಕ ಮಹಾಕಾಳಿಗೆ ಮಂಜೂರಾಗಿದೆ ಎಂದರೆ ಸರಿಯಲ್ಲ. ಮಹಾಕಾಳಿ ಗೇಣಿ ಅರ್ಜಿ ಸಲ್ಲಿಸಿದ ಜಮೀನುಗಳ ಮಾಲೀಕರು ಯಾರು ಎಂದು ಗೊತ್ತಿಲ್ಲ. ಮಹಾಕಾಳಿ ಹೆಂಗ್ಸು ಸರ್ವೆ ನಂಬ್ರ 95/1, 81/7, 81/2 ರ ಆಸ್ತಿಗಳು ಭೂಮಾಲೀಕರಾದ ಗುರುದತ್ತ ರಾವ್ ಮತ್ತು ಕಮಲ ರಾವ್ ಅವರಿಂದ ಗೇಣಿಗೆ ಪಡೆದಿದ್ದು ನನಗೆ ಗೊತ್ತಿಲ್ಲ. ಮಹಾಕಾಳಿ ತೀರಿಕೊಂಡ ನಂತರ ಆಸ್ತಿಗಳು ಆಕೆಯ ನಾಲ್ಕು ಜನ ಮಕ್ಕಳಿಗೆ ಬಂದಿದೆ ಎಂದರೆ ಸಾಕ್ಷಿಯು ಮೂರು ಜನ ಮಕ್ಕಳು ಎನ್ನುತ್ತಾರೆ. ಸದರಿಯವರ ಕುಟುಂಬದಲ್ಲಿ ಬಾಯ್ದಾರೆ ಭಾಗವಾದ ಬಗ್ಗೆ ಗೊತ್ತಿಲ್ಲ.

**<u>ಮುಂದುವರಿದ ಪಾಟೀ ಸವಾಲು:</u>** ಕಾಲಾವಕಾಶ ಕೋರಿದ್ದರಿಂದ ಮುಂದುಡಲಾಯಿತು.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**)**

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**